ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಹೊನ್ನಾವರ.

ಸಿಸಿ ನಂಃ 610/2018
ಪಿ ಡಬ್ಲುಃ 1
ಸಿ ಡಬ್ಲುಃ 2

| | |
|---|---|
| ಸಾಕ್ಷಿದಾರರ ಹೆಸರು | ವಸಂತ ನಾಯ್ಕ |
| ತಂದೆಯ ಹೆಸರು | ಈಶ್ವರ ನಾಯ್ಕ |
| ವಯಸ್ಸು | 40 |
| ಉದ್ಯೋಗ | ಚಾಲಕ |
| ವಾಸ್ತವ್ಯ | ಹೊಸಕುಳಿ, ಹೊನ್ನಾವರ. |

ಸಾಕ್ಷಿಯನ್ನು ದಿನಾಂಕ 15-11-2021 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ಈಗ ಸಾಕ್ಷಿಗೆ 1 ಪಂಚನಾಮೆ ತೋರಿಸಲಾಯಿತು. ಅದರಲ್ಲಿ ಸಹಿ ಗುರುತಿಸಿದ್ದರಿಂದ ಅದನ್ನು ನಿಪಿ 1 ಎಂದು ಸಾಕ್ಷಿ ಸಹಿ 1 ಎ ಎಂದು ಗುರುತಿಸಲಾಯಿತು. ಈಗ್ಗೆ 4 ವರ್ಷದ ಹಿಂದೆ ನಾನು ಚಂದಾವರದ ಕಡತೋಕಾ ಕ್ರಾಸ್ ಬಳಿದ್ದಾಗ ಪೋಲೀಸರು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿದ್ದೇನೆ. ನಿಪಿ 1 ರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಪೋಲೀಸರು ಓದಿ ಹೇಳಿಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ, ವಸ್ತುಗಳನ್ನು ಜಪ್ತು ಮಾಡಿಲ್ಲ. ಆರೋಪಿತರನ್ನು ಗುರುತಿಸಲಾಗುವುದಿಲ್ಲ.
(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದಃ

ದಿಃ 16.04.2017 ರಂದು ಪೋಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊದಿಕೆ ಶಿರೂರಿನ ಕಡತೋಕಾ ಕ್ರಾಸ್ ಹತ್ತಿರ ದಾಳಿ ಮಾಡಿ ಅಲ್ಲಿ ಆರೋಪಿತರು ಕಾನೂನು ಬಾಹಿರವಾಗಿ ಲಾಟರಿ ಆಟ ಆಡುತ್ತಿದ್ದು ಅವರ ಮೇಲೆ ದಾಳಿ ಮಾಡಿ 4 ಜನ ಆರೋಪಿತರನ್ನು ದಸ್ತಗಿರಿ ಮಾಡಿ ಅವರ ಬಳಿಯಿಂದ ಹಣ ಮತ್ತು ಕ್ಯಾಲೆಂಡರ್, ಐರನ್ ಬಾಕ್ಸ, ಸ್ಟೀಲ್ ಸ್ಟೌವ್ , ವಾಟರ್ ಟ್ಯಾಂಕ್ , ಗ್ರೈಂಡರ್ , ನೋಟ್ ಬುಕ್ ಈ ರೀತಿ ಒಟ್ಟು 19 ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಆ ಬಗ್ಗೆ ನಮ್ಮ ಸಮಕ್ಷಮ ಪಂಚನಾಮೆ ಬರೆದು ಓದಿ ಹೇಳಿ ಸಹಿ ಪಡೆದಿದ್ದಾರೆ ಎನ್ನುವುದು ಸರಿಯಲ್ಲ. ಆಗ ನಾನು ಮತ್ತು ಚಾಸಾ 3 ರವರು ಆ ಸ್ಥಳದಲ್ಲಿ ಹಾಜರಿದ್ದು ಪಂಚರಾಗಿ ಸಹಕರಿಸಿ ಪಂಚನಾಮೆಗೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ದಿನ

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಆಟ ಆಡುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ನಿಜವಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ ಹೊನ್ನಾವರ.